JULY 28, 2025

AKASHAVANI - DHARWAD

PRADESH SAMACHARA (KANNADA) 12 PM

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ರಾಜ್ಯದಲ್ಲಿ, ಜರ್ಮನ್ ಮಾದರಿಯಲ್ಲಿ ಮನೆ–ಮನೆಗೆ ಪೊಲೀಸ್ ವ್ಯವಸ್ಥೆಯನ್ನು ಜಾರಿಗೊಳಿಸುವ ಮೂಲಕ, ಸಮಾಜ ಸುಧಾರಣೆಯತ್ತ ಗೃಹ ಇಲಾಖೆ ಮಹತ್ವದ ಹೆಜ್ಜೆ ಇರಿಸಿದೆ ಎಂದು ಗೃಹ ಸಚಿವ ಡಾಕ್ಟರ ಜಿ.ಪರಮೇಶ್ವರ ಹೇಳಿದ್ದಾರೆ. ದಾವಣಗೆರೆಯಲ್ಲಿ ಆಯೋಜಿತ ಮನೆ ಮನೆಗೆ ಪೊಲೀಸ್ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಇಲಾಖೆಯನ್ನು ಜನಸ್ನೇಹಿಯಾಗಿಸುವ ನಿಟ್ಟಿನಲ್ಲಿ, ಇದು ಮಹತ್ವದ ಯೋಜನೆಯಾಗಿದೆ. ಇದರಡಿ ಗ್ರಾಮಗಳಲ್ಲಿನ 50 ರಿಂದ 60 ಮನೆಗಳಿಗೆ ಪೊಲೀಸ್ ಕಾನಸ್ಟೇಬಲ್ ತೆರಳಿ, ದಿನನಿತ್ಯದ ಘಟನೆಗಳ ಬಗ್ಗೆ ಮಾಹಿತಿ ಸಂಗ್ರಹಿಸಲಿದ್ದಾರೆ ಎಂದರು. ಕಾನಸ್ಟೇಬಲ್ ಗಳಿಗೆ, ಹೊಸ ಕ್ಯಾಪ್– ಸ್ಲೋಚ್ ದಿರಿಸಿನ ಬಗ್ಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಶೀಘ್ರದಲ್ಲಿ ಜಾರಿಗೆ ಬರಲಿದೆ ಎಂದರು.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಆಕಾಶವಾಣಿ, ಜನಪ್ರಿಯ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ರಾಜ್ಯದ ಎರಡು ಪ್ರಮುಖ ಕೋಟೆಗಳ ಬಗ್ಗೆ ಉಲ್ಲೇಖಿಸಿದ್ದಾರೆ. ಪಾಳೆಗಾರರು ಬಲಪಡಿಸಿದ ಚಿತ್ರದುರ್ಗದ, ಏಳು ಸುತ್ತಿನ ಕೋಟೆಯ ವಿಶೇಷತೆ ಬಗ್ಗೆ ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಚಿತ್ರದುರ್ಗ ಸರ್ಕಾರಿ ಕಾಲೇಜು ನಿವೃತ್ತ ಪ್ರಾಂಶುಪಾಲ ಹಾಗೂ ಕನ್ನಡ ಸಂಶೋಧಕರಾದ ಬಿ. ರಾಜಶೇಖರಪ್ಪ...

<><><>

ಧ್ವನಿ: ಬಿ.ರಾಜಶೇಖರಪ್ಪ 39 ಸೆಕೆಂದುಗಳು

<><><>

ರಾಜ್ಯದಲ್ಲಿ ಮುಂಗಾರು ಹಂಗಾಮಿನ, ಕೃಷಿ ಚಟುವಟಿಕೆಗಳಿಗೆ ರಸಗೊಬ್ಬರದ ಕೊರತೆಯಾಗದಂತೆ ಕೃಷಿ ಇಲಾಖೆಯಿಂದ ಕ್ರಮ ವಹಿಸಲಾಗುತ್ತಿದ್ದು, ಯೂರಿಯಾ ರಸಗೊಬ್ಬರವನ್ನು ಸಕಾಲಕ್ಕೆ ಪೂರೈಕೆ ಮಾಡಲಾಗುವುದು ಎಂದು ಕೃಷಿ ಖಾತೆ ಸಚಿವ ಎನ್. ಚೆಲುವರಾಯ ಸ್ವಾಮಿ ತಿಳಿಸಿದ್ದಾರೆ. ಎಕ್ಸ್ ಮಾಧ್ಯಮದಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ರೈತರು ಯಾವುದೇ ತರಹದ ಊಹಾ ಪೋಹಗಳಿಗೆ ಕಿವಿಗೊಡದೆ, ನಿರಾತಂಕವಾಗಿ ಕೃಷಿ ಚಟುವಟಿಕೆಯಲ್ಲಿ ತೊಡಗುವಂತೆ ಕೋರಿದ್ದಾರೆ.

<><><>

ಗದಗ ತಾಲೂಕು, ಸೊರಟೂರ ಗ್ರಾಮದಲ್ಲಿ, ರಾಜ್ಯ ರೈತ ಸಂಘ, 35ನೇ ರೈತ ಹುತ್ಮಾತ ದಿನ ಆಯೋಜಿಸಿತ್ತು. ಹಾವೇರಿ ಸಂಸದ ಬಸವರಾಜ ಬೊಮ್ಮಾಯಿ ಅವರು, ಬಗೈರ್ ಹುಕುಂ ಚಳವಳಿಯಲ್ಲಿ ಹುತಾತ್ಮರಾದ, ಮಹಾಲಿಂಗಪ್ಪ ಗಿಡ್ಡಕೆಂಚಣ್ಣವರ,

ಚನ್ನಬಸಪ್ಪ ನಿರ್ವಾಹಣ ಶೆಟ್ರು ಹಾಗೂ ದೇವಲಪ್ಪ ಲಮಾಣಿ ಅವರ ಸ್ಮಾರಕಕ್ಕೆ, ಗೌರವ ಅರ್ಪಿಸಿದರು. ರೈತ ಮುಖಂಡರು ಸೇರಿದಂತೆ ಗಣ್ಯರು ಪಾಲ್ಗೊಂಡಿದ್ದರು.

<><><>

ರಾಜ್ಯದ ಹೃದಯ ಭಾಗ ದಾವಣಗೆರೆಯಲ್ಲಿ, ಒನಕೆ ಓಬವ್ವನವರ, ರಾಜ್ಯ ಮಟ್ಟದ ಜಯಂತಿಯನ್ನು, ನವೆಂಬರ್ ತಿಂಗಳಲ್ಲಿ, ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು, ಗೃಹ ಖಾತೆ ಸಚಿವ ಜಿ.ಪರಮೇಶ್ವರ ತಿಳಿಸಿದ್ದಾರೆ. ದಾವಣಗೆರೆಯಲ್ಲಿ ಛಲವಾದಿ ಮಹಾಸಭಾ ಆಯೋಜಿಸಿದ್ದ, ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು. ಒನಕೆ ಓಬವ್ವ ದಿಟ್ಟ ಮಹಿಳೆ. ಅವರ ಸಾಹಸ ಮತ್ತು ತ್ಯಾಗ ಸಮಾಜಕ್ಕೆ ಸ್ಫೂರ್ತಿ ಎಂದರು.

<><><>

ಕಲೆ ಹಾಗೂ ಸಾಹಿತ್ಯದ ಮೂಲಕ ಕನ್ನಡ ಭಾಷೆ ಹಾಗೂ ಸಂಸ್ಕೃತಿ ಸಮೃದ್ಧವಾಗಿ ಬೆಳೆಯಲು ಸಾಧ್ಯ ಎಂದು ಕಾನೂನು, ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ ಪಾಟೀಲ ಹೇಳಿದರು. ಧಾರವಾಡ ನಗರದ ಕನ್ನಡ ಭವನದಲ್ಲಿ ಆಯೋಜಿತ, ಕೀರ್ತಿನಾಥ ಕುರ್ತಕೋಟಿ ಅವರು ರಚಿಸಿದ ವರಕವಿ ದ.ರಾ ಬೇಂದ್ರೆ ಅವರ ಸಾಹಿತ್ಯದ ವಿಮರ್ಶಾ ಸಂಪುಟ 'ವಾಗರ್ಥ' ಹಾಗೂ ಡಾಕ್ಟರ ಕಮಲಾಕರ ಭಟ್ ಅವರ 'ಕರ್ಟಸಿ ಆಫ್ ಕ್ರಿಟಿಸಿಸಂ' ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದರು. ಕನ್ನಡಕ್ಕಾಗಿ ದುಡಿದ ಸಾಹಿತಿಗಳ ನೆನಪು ಸ್ಥಿರಸ್ಥಾಯಿಗೊಳಿಸಲು ಎಲ್ಲರೂ ಪ್ರಯತ್ನ ಮಾಡೋಣ ಎಂದರು.

<><><>

ಹುಬ್ಬಳ್ಳಿಯ ಚೇಂಬರ್ ಆಫ್ ಕಾಮರ್ಸ್‌ನಲ್ಲಿ, ಲೋಕಹಿತ ಟ್ರಸ್ಟ್ ಹಾಗು ವಿಶ್ವ ಸಂವಾದ ಕೇಂದ್ರದ ಸಹಯೋಗದಲ್ಲಿ ಆಯೋಜಿತ, ಆದ್ಯ ಪತ್ರಕರ್ತ ಮಹರ್ಷಿ ನಾರದ ಜಯಂತಿ ಕಾರ್ಯಕ್ರಮದಲ್ಲಿ, ಆಕಾಶವಾಣಿ ನಿವೃತ್ತ ಸುದ್ದಿವಾಚಕ ನಾಗೇಶ ಶಾನಭಾಗ ಹಾಗೂ ಹಿರಿಯ ಪತ್ರಕರ್ತ ಮೋಹನ ಹೆಗಡೆ ಅವರನ್ನು ಪ್ರಸಾರ ಭಾರತಿ, ಮಾಜಿ ಅಧ್ಯಕ್ಷ ಡಾಕ್ಟರ ಎ.ಸೂರ್ಯ ಪ್ರಕಾಶ ಸನ್ಮಾನಿಸಿದರು.

<><><>

ಪತ್ರಿಕಾರಂಗವು ಪ್ರಜಾಪ್ರಭುತ್ವದ ನಾಲ್ಕನೇ ಅಂಗವೆಂದು ಪರಿಗಣಿಸಲ್ಪಟ್ಟಿದ್ದು, ಜನರು ಹಾಗೂ ಸರ್ಕಾರಗಳ ನಡುವೆ ಸಂಪರ್ಕ ಸೇತುವೆಯಾಗಿ, ಸಮರ್ಥವಾಗಿ ಕಾರ್ಯನಿರ್ವಹಿಸಬೇಕು ಎಂದು ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾಕ್ಟರ ಶರಣಪ್ರಕಾಶ ಪಾಟೀಲ ಹೇಳಿದರು. ಲಿಂಗಸುಗೂರು ಪಟ್ಟಣದ, ಶ್ರೀ ವಿಜಯ ಮಹಾಂತೇಶ್ವರ ಶಾಖಾ ಮಠದಲ್ಲಿ, ಪತ್ರಿಕಾ ದಿನಾಚರಣೆ, ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

<><><>

ಮಂಡ್ಯ ಜಿಲ್ಲೆ, ಕಾವೇರಿ ಜಲಾನಯನ ಪ್ರದೇಶದಲ್ಲಿ ನಿರಂತರ ಮಳೆಯಾಗುತ್ತಿರುವ ಹಿನ್ನಲೆ, ಶ್ರೀರಂಗಪಟ್ಟಣ ತಾಲೂಕು, ಕೃ ್ಣರಾಜ ಸಾಗರ ಅಣೆಕಟ್ಟೆ ಎರಡನೇ ಬಾರಿಗೆ ಭರ್ತಿಯಾಗಿದೆ. ಹೆಚ್ಚುವರಿ 85 ಸಾವಿರ ಕ್ಯೂಸೆಕ್ ನೀರನ್ನು ಹೊರಬಿಡಲಾಗುತ್ತಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ

<><><>